ಮಗ ಸಾಕ್ಷಿ ಕಟ್ಟೆಯಲ್ಲಿ ನಿಂತು, ತನ್ನ ಸ್ವಂತ ತಾಯಿಗೆ ಪ್ರಿಯಕರನು ಇದ್ದನೆಂತಲೂ ಮತ್ತು ತಾನು ಬಾಲ್ಯದಲ್ಲಿ ಅವರಿಬ್ಬರ ಅಕ್ರಮ ಸಂಬಂಧವನ್ನು ಕಣ್ಣಾರೆ ಕಂಡಿದ್ದೆ ಎಂಬ ಆರೋಪವನ್ನು ಮಾಡುತ್ತಿದ್ದಾಗ ಒಮ್ಮೆಯೂ ಕಣ್ಣೆತ್ತಿ ತಾಯಿಯ ಮುಖವನ್ನು ನೋಡಲಿಲ್ಲ. ಯಾಕೆ? ಮತ್ತು ಬಹಿರಂಗವಾಗಿ ತನ್ನ ತಾಯಿಯ ಶೀಲದ ಬಗ್ಗೆ ಮಾತನಾಡುವಾಗ ತನ್ನ ಕೈಯಾರೆ ತಾನೇ ನಾಶ ಮಾಡಿಕೊಳ್ಳುತ್ತಿದ್ದ. ತನ್ನ ಸಾಮಾಜಿಕ ಘನತೆಯನ್ನು ಕೂಡಾ ಲೆಕ್ಕಿಸದೆ ತನ್ನ ತಂದೆಯ ನೇರ ಮೇಲ್ವಿಚಾರಣೆಯಲ್ಲಿ ನುಡಿದ ಆ ಹೇಳಿಕೆಯ ಸತ್ಯಾಸತ್ಯತೆಯನ್ನು ತಾನು ಹೇಗೆ ನಿರ್ಧರಿಸಬೇಕು.

ಹೀಗಾಗಿ ಆ ವೃತ್ತಿ ಅವನಿಗೆ ಸುಲಭವಾಗಿರಲಿಲ್ಲ. ಅವನ ವೈಯಕ್ತಿಕ ಬದುಕಂತೂ ಹೇಳಿಕೊಳ್ಳಲಾರದಷ್ಟು ಛಿದ್ರಗೊಂಡಿತ್ತು. ಈಗಲೂ ಅಂತಹದೇ ವಿಷಮ ಪರಿಸ್ಥಿತಿಯಲ್ಲಿ ಅವನು ಸಿಲುಕಿದ್ದ. ವೈಯಕ್ತಿಕ ಮತ್ತು ವೃತ್ತಿಪರ ಬದುಕನ್ನು ಸಂಪೂರ್ಣವಾಗಿ ಪ್ರತ್ಯೇಕಿಸಿ ತಕ್ಕಡಿಯ ಬೇರೆ ಬೇರೆ ತಟ್ಟೆಗಳಲ್ಲಿಟ್ಟು ತೂಗುವ ಕಲೆಗಾರಿಕೆ ಅವನಿಗೆ ಸಿದ್ಧಿಸಿರಲಿಲ್ಲ. ವೈಯಕ್ತಿಕ ಸವಾಲುಗಳು ಅವನನ್ನು ಬೆಂಬಿಡದಂತೆ ಕಾಡುತ್ತಿದ್ದಲ್ಲಿ ವೃತ್ತಿಪರ ತಳಮಳಗಳು ಅವನ ಆತ್ಮವನ್ನು ಘಾಸಿಗೊಳಿಸಿ ಸತ್ವವನ್ನು ಹೀರುತ್ತಿದ್ದವು.

ಕೋರ್ಟಿಗೆ ಹೋಗಲು ಹೊತ್ತಾಯಿತೆಂದು ಅವನು ಗಡಿಬಿಡಿಯಲ್ಲಿಯೇ ಕಾರಿನಲ್ಲಿ ಕುಳಿತುಕೊಂಡ. ಡ್ರೈವರ್ ಕೃಷ್ಣಪ್ಪ ಕಳೆದ ಮೂರು ವರ್ಷಗಳಿಂದ ಅವನ ಕಾರಿನ ಚಾಲಕನಾಗಿದ್ದ. ಮತ್ತು ಅವನ ದೈನಂದಿನ ವೇಳಾಪಟ್ಟಿಗೆ ಒಗ್ಗಿಹೋಗಿದ್ದ. ಹೀಗಾಗಿ ಅವನು ಸಾಹೇಬರ ಫೈಲ್‌ಗಳನ್ನು ಮತ್ತು ಅಗತ್ಯದ ಸಾಮಗ್ರಿಗಳನ್ನು ಮೊದಲೇ ಕಾರಿನ ಡಿಕ್ಕಿಯಲ್ಲಿ ಜೋಡಿಸಿದ್ದ. ಶಾಹಿದ್ ಅಹಮದ್ ಅಂದು ತೀರಾ ಅಸ್ತವ್ಯಸ್ತತೆಯಿಂದ ಕೂಡಿದ್ದ. ಹಾಗೂ ಅವನ ದೈನಂದಿನ ಕೆಲಸ ಕಾರ್ಯಗಳು ಏರುಪೇರಾಗಿದ್ದವು. ಅವನ ಮನದ ಕೊಳಕ್ಕೆ ಕಲ್ಲು ಬಿದ್ದಿತ್ತು. ತನ್ನ ಎಲ್ಲಾ ಅಧಿಕಾರ, ಅಂತಸ್ತು ಮತ್ತು ದರ್ಪದ ನಡುವೆಯೂ ಅವನು ಅಸಹಾಯಕನಾಗಿದ್ದ.

ರೂಹಿಯ ಬಗ್ಗೆ ಅವನು ಅಪಾರವಾದ ಗಿಲ್ಟ್‌ನಿಂದ ನರಳುತ್ತಿದ್ದ. ಅವಳ ಬಗ್ಗೆ ತಾನು ತೋರಬೇಕಿದ್ದ ಕಾಳಜಿ, ಒಲುಮೆ ಮತ್ತು ಜವಾಬುದಾರಿಯಲ್ಲಿ ಲೋಪವಾಗಿದೆ ಎಂಬುದು ಅವನ ಅಳಲು. ತನಗೆ ತಾನೇ ಉತ್ತರಿಸಲಾಗದ ಅತೀವ ಗಿಲ್ಟ್‌ನಿಂದ ಅವನು ನರಳುತ್ತಿದ್ದ. ರಾಬಿಯಾ ಬೆಳಬೆಳಗ್ಗೆ ಬೆರಳಿನ ಮೇಲೆ ಅವಳ ವಯಸ್ಸನ್ನು ಲೆಕ್ಕ ಹಾಕಿ ಬಿಟ್ಟಳು. ಆದರೆ ತಾನಾದರೂ ಏನು ಮಾಡಬಹುದು? ತಾನು ಬ್ರೋಕರ್‌ಗಳ ಜೊತೆ ಮಾತನಾಡಿ ಮಗಳ ಮದುವೆ ನಿಷ್ಕರ್ಶೆ ಮಾಡಬಹುದೇ? ಅಥವಾ ತನ್ನ ಸಂಬಂಧಿಗಳ ಮೂಲಕ ವ್ಯವಹರಿಸಬಹುದೇ? ಹೀಗೆ ಬೇರೆಯವರ ಮೂಲಕ ಪ್ರಯತ್ನಪಟ್ಟಲ್ಲಿ ತನ್ನ ಮಗಳಿಗೆ ಅನುರೂಪವಾದ ವರ ಸಿಗಬಹುದೇ? ಮದುವೆಯ ವಿಷಯದಲ್ಲಿ ಬರೀ ಹೊರನೋಟದ ಸಾಮ್ಯತೆಯೊಂದೇ ಸಾಕೇ ಅಥವಾ ಇನ್ನೇನಾದರೂ ಅಗತ್ಯವಿದೆಯೇ? ಈ ಪ್ರಶ್ನೆ ಅವನ ಮನದಲ್ಲಿ ಉದ್ಭವವಾಗುತ್ತಿದ್ದಂತೆಯೇ ಅವನ ಮನಃಪಟಲದ ಮೇಲೆ ಅವನು ಅವಲೋಕಿಸಿದ ಪ್ರಕರಣಗಳು ದೈತ್ಯ ನರ್ತನ ಮಾಡಲಾರಂಭಿಸುತ್ತಿದ್ದವು. ಒಂದೇ ಎರಡೇ... ಎಂತಹ ಕ್ರೌರ್ಯದ ಅನಾವರಣ! ಮನುಷ್ಯ ಸಂಬಂಧಗಳ ವಿಚಿತ್ರ ತಿರುವುಗಳು, ಊಹಿಸಲು ಕೂಡ ಸಾಧ್ಯವಿಲ್ಲದ ಮನುಷ್ಯ ಸ್ವಭಾವದ ಹೀನ ಸುಳಿಗಳು. ಕೌಟುಂಬಿಕ ಮೌಲ್ಯದ ಅಧಃಪತನದ ಪರಾಕಾಷ್ಠೆ. ಅಷ್ಟೇ ಅಲ್ಲದೆ ವೈರತ್ವದ ವಿಜೃಂಭಣೆಯ ಅಟ್ಟಹಾಸ. ಕೌಟುಂಬಿಕ ಸಂಬಂಧಗಳ ವಿನಾಶವನ್ನು ಕಂಡು ಅವನ ಎದೆಯೊಡೆದು ಹೋಗುತ್ತಿತ್ತು. ಆ ನಗ್ನ ಸತ್ಯಗಳು ಬೆಂಬಿಡದ ಭೂತಗಳಂತೆ ಅವನನ್ನು ಕಾಡಿಸುತ್ತಿದ್ದವು.

ಮೂವತ್ತು ವರ್ಷಗಳ ದಾಂಪತ್ಯ ಜೀವನದ ಜೊತೆಗಾತಿಯಾಗಿದ್ದ ರಾಬಿಯಾಳ ಬಗ್ಗೆ ಅವನಿಗೆ ಅಪಾರ ಪ್ರೀತಿ ಮತ್ತು ಗೌರವಗಳಿದ್ದವು. ಆದರೆ ರೂಹಿಯ ಮದುವೆಯ ವಿಷಯವನ್ನು ಅವಳು ಪ್ರಸ್ತಾಪಿಸಲು ಆರಂಭಿಸಿದಾಗ ಮಾತ್ರ ಅವನ ಮೈಮೇಲೆ ಮುಳ್ಳುಗಳೇಳುತ್ತಿದ್ದವು. ಮತ್ತು ಅವಳ